# ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

ಸಂಖ್ಯೆ: ಲೋಕ್/ವಾಹನ/23/ಕೆಎ-04-ಜಿ-1358 (ಟಾಟಾ ಸುಮೋ)

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 22-05-2023

## ಪ್ರ ಕ ಟ ಣೆ

ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಇಲಾಖಾ ವಾಹನ ಸಂಖ್ಯೆ: ಕೆಎ-04-ಜಿ-1358 ರ ಟಾಟಾ ಸುಮೋ ವಾಹನಕ್ಕೆ ಸರ್ವೀಸ್, ಅಗತ್ಯ ಆಯಿಲ್ ಬದಲಾವಣೆ, ಫಿಲ್ಟರ್‌ಗಳ ಬದಲಾವಣೆ ಮತ್ತು ಜನರಲ್ ಚೆಕ್‌ಅಪ್ ಕಾರ್ಯಗಳನ್ನು ಮಾಡಿಸಲು ಉದ್ದೇಶಿಸಲಾಗಿದೆ. ಆದ್ದರಿಂದ, ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ:34:ಬಿಸಿಎ:2004 ದಿನಾಂಕ: 10-03-2005ರಲ್ಲಿ ಮೀಸಲಾತಿ ಪ್ರಾತಿನಿಧ್ಯ ಕಲ್ಪಿಸಿರುವ ಹಾಗೂ ಇತರೆ ಸಂಬಂಧಪಟ್ಟ ಅಧಿಕೃತ ದುರಸ್ತಿದಾರರಿಂದ ವಾಹನಕ್ಕೆ ಸರ್ವೀಸಿಂಗ್ ಕಾರ್ಯಗಳನ್ನು ಮಾಡಿಸಲು ಎಲ್ಲಾ ವೆಚ್ಚಗಳು ಸೇರಿದಂತೆ ತಗಲುವ ವೆಚ್ಚದ ಬಗ್ಗೆ ಸ್ಪರ್ಧಾತ್ಮಕ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ದುರಸ್ತಿದಾರರು ದರಪಟ್ಟಿಗಳನ್ನು ದಿನಾಂಕ: 30-05-2023 ರಂದು ಸಾಯಂಕಾಲ 5-00 ಗಂಟೆಯೊಳಗಾಗಿ ಮುಚ್ಚಿದ ಲಕೋಟೆಯಲ್ಲಿ ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ ಸಲ್ಲಿಸತಕ್ಕದ್ದು, ಸದರಿ ಲಕೋಟೆಯ ಮೇಲೆ " **ಕೆಎ-04-ಜಿ-1358 ಟಾಟಾ ಸುಮೋ "ವಾಹನದ ಸರ್ವೀಸ್ ದರಪಟ್ಟಿ"** ಎಂಬುದಾಗಿ ನಮೂದಿಸತಕ್ಕದ್ದು.

ನಿಬಂಧಕರು
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.
22/05/23

ಪ್ರತಿಯನ್ನು:

1. ಸೂಚನಾ ಫಲಕಕ್ಕೆ.
2. ಕಚೇರಿ ಕಡತಕ್ಕೆ
3. ಸಾಂಖ್ಯಿಕ ಶಾಖೆಗೆ: ಸದರಿ ಪ್ರಕಟಣೆಯನ್ನು ಈ ಕಚೇರಿಯ ಅಂತರ್ಜಾಲದಲ್ಲಿ ಪ್ರಕಟಿಸಲು ಹಾಗೂ ಸದರಿ ಪ್ರಕಟಣೆಯನ್ನು ದಿನಾಂಕ: 30-05-2023ರ ನಂತರ ತೆಗೆಯಲು ಕೋರಿದೆ.